



ಮುನ್ನಡೆಸಿದ್ದು ಇದೇ ಮೊದಲೆನ್ನಬೇಕು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗುತ್ತಿದ್ದಂತೆ ಸಂಸ್ಕೃತಿ ಇಲಾಖೆಯ ಸಾರಥ್ಯವನ್ನು ವಹಿಸಿದ್ದು ಕಲಾವಿದೆ, ಅಭಿನೇತ್ರಿ, ಕಲೆಗಾಗಿಯೇ ತಮ್ಮ ಜೀವನವನ್ನು ತೇಯ್ದ ಉಮಾಶ್ರೀ ಅವರಿಗೆ. ಇದು ಪ್ರಜ್ಞಾಪೂರ್ವಕವಾಗಿ ಸಿದ್ದರಾಮಯ್ಯ ಕೈಗೊಂಡ ಕ್ರಮವೂ ಹೌದು. ಕನ್ನಡವೆಂದರೆ ಬರಿ ನುಡಿಯಲ್ಲ, ಹಿರಿದಿದೆ ಅದರರ್ಥ ಎಂಬ ಕವಿವಾಣಿಯನ್ನು ಅರ್ಥೈಸಿಕೊಂಡಿರುವ ಸಿದ್ದರಾಮಯ್ಯ, ಸಂಸ್ಕೃತಿ ಕಟ್ಟುವ ಮುಖೇನ ಕನ್ನಡವನ್ನು ಉಳಿಸುವ ಕೆಲಸಕ್ಕೆ ಮುಂದಾದರು. ಹೀಗಾಗಿಯೇ ಉಮಾಶ್ರೀ ಅವರಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣದ ಜತೆಗೆ ಹೆಚ್ಚಿನ ಹೊಣೆ ಹೊರೆಸಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗುವ ಪೂರ್ವದಲ್ಲಿ ಕನ್ನಡ ಸಂಸ್ಕೃತಿ ಇಲಾಖೆಗೆ ನೀಡುತ್ತಿದ್ದ ಅನುದಾನ ಕೇವಲ ರೂ.169 ಕೋಟಿ ಮಾತ್ರ. 2013 ರ ಜುಲೈನಲ್ಲಿ ಅವರು ಮಂಡಿಸಿದ ಬಜೆಟ್‌ನಲ್ಲಿ ಕನ್ನಡದ ಕೆಲಸಕ್ಕೆ ರೂ.263 ಕೋಟಿ ಕೊಟ್ಟರು. 2017ರಲ್ಲಿ ಈ ಮೊತ್ತ ರೂ.367 ಕೋಟಿಗೆ ಏರಿಕೆಯಾಯಿತು. ಇದು ಅವರ ಕನ್ನಡ ಪರ ಧೋರಣೆಗೆ ಸಾಕ್ಷಿ.

ಕನ್ನಡದ ಕೆಲಸವೆಂದರೆ ಅದು ಕೇವಲ ಅನುದಾನ ಕೊಟ್ಟು ಕೈತೊಳೆದುಕೊಳ್ಳುವುದಲ್ಲ. ಕನ್ನಡದ ಹಿರಿಮೆ–ಗರಿಮೆಯನ್ನು ಮುಗಿಲೆತ್ತರಕ್ಕೆ ಏರಿಸುವ ಸಂಕಲ್ಪ ಬಲವೂ ಬೇಕು. ಅದಕ್ಕಾಗಿ ಅನೇಕ ಕೈಂಕರ್ಯಗಳನ್ನು ಅವರು ಕೈಗೊಂಡರು. ಅಧ್ವಾನವೆದ್ದು ಹೋಗಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಾಯಕಲ್ಪ ನೀಡಿ, ಅದಕ್ಕೆ ಕನ್ನಡ ಕಟ್ಟುವ ಹೊಣೆಯನ್ನು ನೀಡಲಾಯಿತು. ಇದು ಈ ಸರ್ಕಾರದ ಮಹತ್ವ ವಿದ್ಯಮಾನಗಳಲ್ಲಿ ಒಂದು.

ಆಡಳಿತವನ್ನು ಪಾರದರ್ಶಕವಾಗಿಸುವ ನಿಟ್ಟಿನಲ್ಲಿ ಇ–ಕಚೇರಿಯನ್ನು ಸಂಪೂರ್ಣವಾಗಿ ಜಾರಿಗೆ ತರಲಾಯಿತು. ಸಂಪೂರ್ಣವಾಗಿ ಕಾಗದ ರಹಿತ, ಇ–ಆಡಳಿತಕ್ಕೆ ಒಳಪಟ್ಟ ಕರ್ನಾಟಕದ ಮೊದಲ ಇಲಾಖೆ ಹಾಗೂ ದೇಶದ 14ನೇ ಇಲಾಖೆ ಎಂಬ ಹೆಗ್ಗಳಿಕೆ ಸಂಸ್ಕೃತಿ ಇಲಾಖೆಯದ್ದಾಗಿದೆ.

ಕಲಾವಿದರಿಗೆ ಮಾಸಾಶನ, ಕನ್ನಡದ ಕೆಲಸ ನಡೆಸುವ ಸಂಘ ಸಂಸ್ಥೆಗಳಿಗೆ ಅನುದಾನ ನೀಡುವಲ್ಲಿ ವಿಳಂಬ ಹಾಗೂ ಭ್ರಷ್ಟಾಚಾರ ನಡೆಯತ್ತದೆ. ಕಾಸು ಬಿಚ್ಚದೆ ಬಿಲ್ ಪಾಸಾಗದು, ಹಣವೂ ಬಿಡುಗಡೆಯಾಗದು ಎಂಬ ಟೀಕೆ ಅನೇಕ ವರ್ಷಗಳಿಂದ ಇತ್ತು. ಸಾಸ್ಕೃತಿಕ ಚಟುವಟಿಕೆ ನಡೆಸುವ ಸಂಘ ಸಂಸ್ಥೆಗಳವರು ಅನುದಾನಕ್ಕೆ ಬೆಂಗಳೂರಿಗೆ ಅಲೆದಾಡಿ, ಮೇಜಿನಿಂದ ಮೇಜಿಗೆ ಹೋದರೂ ಅನುದಾನ ಎಂಬುದು ಕನಸಿನ ಗಂಟಾಗಿತ್ತು. ಇದನ್ನು ತಪ್ಪಿಸಲು ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಕೆ, ಆರ್ ಟಿಜಿಎಸ್ ಮೂಲಕ ಸಂಘದ ಖಾತೆಗೆ ನೇರ ಅನುದಾನ ವರ್ಗಾವಣೆಯ ಪದ್ಧತಿಯನ್ನು ಜಾರಿಗೆ ತರಲಾಯಿತು. ಲಾಬಿ ಮಾಡುವವರಿಗೆ ಮಾತ್ರ ಸಿಗುತ್ತಿದ್ದ ಅನುದಾನ ಕ್ರಮೇಣ ಅರ್ಹರು,



ಕನ್ನಡ ಮತ್ತು ಸಂಸ್ಕೃತಿಗೆ ಈಗ ಒಳ್ಳೆಯ ಕಾಲ. ಕನ್ನಡ ನಾಡು–ನುಡಿಯ ಬಗ್ಗೆ ಅಪಾರ ಅಭಿಮಾನ ಹೊಂದಿರುವ ನಾಯಕರಾದ ಸಿದ್ದರಾಮಯ್ಯನವರು ನಾಡಿನ ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ. ಅಂತೆಯೆ ಕನ್ನಡದ ಯಾವ ನಡೆಗೂ ಅಡ್ಡಿ ಎನ್ನುವುದೇ ಇಲ್ಲ . ಕನ್ನಡದ ವಿಷಯದಲ್ಲಿ ಸರ್ಕಾರ ನೂರಕ್ಕೆ ನೂರು ಪಾಲು ನುಡಿದಂತೆ ನಡೆದಿದೆ; ನಡೆಯುತ್ತಲೂ ಇದೆ.ನಾಡು ಕಟ್ಟುವ ವಿಷಯದಲ್ಲಿ ವಿಚಾರವಂತ ಸಾಹಿತಿ ಮತ್ತು ಕಲಾವಿದರ ಮಾತುಗಳಿಗೆ ರಾಜ್ಯದಲ್ಲಿ ಅಪಾರ ಗೌರವ ಮತ್ತು ಮನ್ನಣೆಯಿದೆ .ನಾಡಿನ ಕಲೆ ಮತ್ತು ಸಂಸ್ಕೃತಿಗಳ ಪ್ರಗತಿಯ ಬಗ್ಗೆ ಮುಕ್ತ ಮನಸ್ಸು ಹೊಂದಿರುವ ಮುಖ್ಯಮಂತ್ರಿಗಳು ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಎಲ್ಲರ ಅಭಿಪ್ರಾಯ ಆಲಿಸುತ್ತಾರೆ. ಒಳ್ಳೆಯ ಪ್ರಸ್ತಾವನೆಗಳಿಗೆ ತಡಮಾಡದೆ ಅನುಮೋದನೆ ನೀಡುತ್ತಾರೆ. ಕನ್ನಡದ ಕೆಲಸಗಳು ಈಗ ಹೊಸ ವೇಗ ಪಡೆದು ಮುನ್ನಡೆಯುತ್ತಿವೆ.

–ಎನ್.ಆರ್. ವಿಶುಕುಮಾರ್
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

